**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5013/2026**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಪ್ರಕಾಶ್.ಬಿ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ದೊಡ್ಡಮಾದಶೆಟ್ಟಿ | **07.08.2026** |
| **ವಯಸ್ಸು** | : | 39 ವರ್ಷ | |
| **ವೃತ್ತಿ** | : | ಟೈಲರ್ | **ಫ್ರಾ.ಸಾಃ 06** |
| **ವಾಸ ಸ್ಥಳ** | : | ಕುಣಗಳ್ಳಿ ಗ್ರಾಮ | **ಚಾ.ಸಾಃ 16** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಮೃತ ಉದಯಕುಮಾರ್ ಗೊತ್ತು. ಆತ ಆಟೋ ಚಾಲಕನಾಗಿದ್ದನು. ದಿಃ 08.03.2024 ರಂದು ಮೃತನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ನಾನು, ಚಾಸಾ 14, 15 ರವರು ಮೃತನು ನೇಣು ಹಾಕಿಕೊಂಡ ಸ್ಥಳಕ್ಕೆ ಹೋಗಿದ್ದೆವು. ಸ್ಥಳಕ್ಕೆ ಪೋಲೀಸರು ಬಂದಿದ್ದರು. ಅಜ್ಜಿಪುರ ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಇದ್ದ ಮರಕ್ಕೆ ಮೃತನು ನೇಣು ಹಾಕಿಕೊಂಡಿದ್ದನು. ಮೃತನು ಒಂದು ಟಿ. ಶರ್ಟ, ಒಂದು ನಿಕ್ಕರ ಅನ್ನು ಧರಿಸಿದ್ದನು. ಒಂದು ನೈಟ್ ಪ್ಯಾಂಟ್ ಮೂಲಕ ನೇಣು ಹಾಕಿಕೊಂಡಿದ್ದನು. ಮೃತನ ಕತ್ತಿನಲ್ಲಿ ಒಂದು ಸ್ಕಾರ್ಫ ಇತ್ತು. ಪೋಲೀಸರು ಸ್ಥಳದಲ್ಲಿ ಶವವನ್ನು ಪರಿಶೀಲಿಸಿ ಮಹಜರ್ ಬರೆದರು. ಶವದ ನಿಕ್ಕರ್ ಜೆಬಿನಲ್ಲಿ ಒಂದು ಪತ್ರ ದೊರೆಯಿತು. ಸದರಿ ಪತ್ರದಲ್ಲಿ ಮೃತನು ನನ್ನ ಸಾವಿಗೆ ಆರೋಪಿತರೇ ಕಾರಣ ಎಂದು ವಿವರಗಳನ್ನು ಬರೆದಿದ್ದನು. ಸ್ಥಳದಲ್ಲಿ ಹವಾಯಿ ಚಪ್ಪಲಿ ಇತ್ತು. ಪೋಲೀಸರು ಮೃತನ ಬಳಿ ದೊರೆತ ಪತ್ರವನ್ನು ಮತ್ತು ಚಪ್ಪಲಿಯನ್ನು ಅಮಾನತ್ತುಪಡಿಸಿಕೊಂಡರು. ಮಹಜರ್ ಬರೆದಾಗ ಬೆಳಗ್ಗೆ 11.30 ರಿಂದ 12.30 ಗಂಟೆ ಆಗಿತ್ತು. ನಾನು ಮಹಜರಿಗೆ ಸಹಿ ಮಾಡಿರುತ್ತೇನೆ. ಚಾಸಾ 14 ಮತ್ತು 15 ರವರು ಮಹಜರಿಗೆ ಸಹಿ ಮಾಡಿದರು. ಮಹಜರ್ ಅನ್ನು ನಿಪಿ 3 ಎಂದು ಈಗಾಗಲೇ

ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 2 ಅನ್ನು ನೋಡಿ ಗುರುತಿಸಿರುತ್ತಾರೆ. ಚಪ್ಪಲಿಯನ್ನು ಮು.ಮಾ 1 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಭಾವಚಿತ್ರಗಳನ್ನು ನೋಡಿ ಗುರುತಿಸಿರತ್ತಾರೆ. ಭಾವಚಿತ್ರಗಳನ್ನು ನಿಪಿ 11 ರಿಂದ 24 ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಮೃತನ ಬಟ್ಟೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 2 ಮತ್ತು 3 ಗುರುತಿಸಲಾಗಿದೆ.

ನಂತರ ಮೃತನ ಶವವನ್ನು ಚಾ.ನಗರ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದರು. ಆಸ್ಪತ್ರೆಯಲ್ಲಿ ಪೋಲೀಸರು ಶವ ಪಂಚನಾಮೆಯನ್ನು ಜರುಗಿಸಿದರು. ಅ ಸಮಯದಲ್ಲಿ ಚಾಸಾ 14 ಮತ್ತು 15 ರವರು ಹಾಜರಿದ್ದರು. ಶವ ಪಂಚನಾಮೆಯನ್ನು ನಿಪಿ 30 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 30(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಪಿ.ಕೆ.ಎಸ್ ವಕೀಲರಿಂದ**

ಮೃತ ಉದಯಕುಮಾರ್ ನನಗೆ ಸಂಬಂಧಿಕನಲ್ಲ. ನಾನು ಮಹಜರ್ ವಿಚಾರಗಳನ್ನು ಓದಿರುವುದಿಲ್ಲ. ನಿಪಿ 2 ಕ್ಕೆ ಪೋಲೀಸರು ನನ್ನ ಸಹಿ ಪಡೆಯಲಿಲ್ಲ. ನಿಪಿ 3 ರನ್ನು ಕೈ ಬರಹದಲ್ಲಿ ಬರೆದಿರುತ್ತಾರೆ. ನಾನು ಸ್ಥಳದಲ್ಲಿ ನಿಪಿ 2 ರ ವಿಚಾರಗಳನ್ನು ಓದಿರುವುದಿಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ನಿಪಿ 3 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ನಿಪಿ 2 ಅನ್ನು ನೋಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ದಿನ ಚಾಸಾ 1 ರವರ ಜೊತೆ ಬಂದಿರುತ್ತೇನೆ. ನಾನು ಚಾಸಾ 1 ರವರು ಹೇಳಿಕೊಟ್ಟಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ